**ಸರಕಾರಿ ಹಿರಿಯ ಪ್ರಾಥಮಿಕ ಶಾಲೆ ಗಾಂಧಿನಗರ, ಶಿರಸಿ ಶಿರಸಿ ಶೈಕ್ಷಣಕ ಜಿಲ್ಲೆ**



ಸ.ಹಿ.ಪ್ರಾ.ಶಾಲೆ ಗಾಂಧಿನಗರ

ಸರಕಾರಿ ಹಿರಿಯ ಪ್ರಾಥಮಿಕ ಶಾಲೆ ಗಾಂಧಿನಗರ ಇದು ಶಿರಸಿ ತಾಲೂಕಾ ಕೇಂದ್ರದ ಹೃದಯಭಾಗದಲ್ಲಿರುವ ಉತ್ತರಕನ್ನಡ ಜಿಲ್ಲೆಯ ಪ್ರಸಿಧ್ಧ ಅಂಬಾಗಿರಿ ದೇವಾಲಯದ ಪಕ್ಕದಲ್ಲಿ 1973ರಲ್ಲಿ ಸ್ಥಾಪನೆಯಾದ 39 ವರ್ಷ ಇತಿಹಾಸವುಳ್ಳ ಶಾಲೆಯಾಗಿದೆ. ಇಲಾಖೆಯ ಜೊತೆಯಲ್ಲಿ ಬಹುತೇಕ ದಾನಿಗಳಿಂದ ನಿರ್ಮಿಸಲ್ಪಟ್ಟ ಕೊಠಡಿಗಳು ಇರುವುದು ಈ ಶಾಲೆಯ ಬಗ್ಗೆ ಸಮುದಾಯದವರಲ್ಲಿ ಇರುವ ಕಾಳಜಿಗೆ ಸಾಕ್ಷಿಯಾಗಿದೆ. . 7 ಜನ ಶಿಕ್ಷಕರು ಹಾಗೂ ಒಬ್ಬ ಮುಖ್ಯ ಶಿಕ್ಷರನ್ನೊಳಗೊಂಡಂತೆ ಒಟ್ಟೂ 8 ಜನ ಶಿಕ್ಷಕರು ಈ ಶಾಲೆಯಲ್ಲಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಒಟ್ಟೂ 211 ವಿದ್ಯಾರ್ಥಿಗಳು ಈ ಶಾಲೆಯಲ್ಲಿ ಕಲಿಯುತ್ತಿದ್ದು. 90% ರಷ್ಟು ವಿದ್ಯಾರ್ಥಿಗಳು ಹಿಂದುಳಿದ, ಪರಿಶಿಷ್ಟಜಾತಿಯ ಬಡ ಕುಟುಂಬದ ಮಕ್ಕಳಾಗಿರುತ್ತಾರೆ. ಶೈಕ್ಷಣಿಕ, ಸಾಂಸ್ಕೃತಿಕ ಹಾಗೂ ಪಠ್ಯೇತರ ವಿಷಯಗಳಲ್ಲಿ ಪ್ರತಿಭೆಯನ್ನು ಹೊಂದಿದ ಶಾಲೆ ಇದಾಗಿದೆ.

ಎಜ್ಯುಸ್ಯಾಟ್, ಕಂಪ್ಯೂಟರ್ ಶಿಕ್ಷಣ, ಪ್ರಯೋಗಾಲಯ, ರೀಡಂಗ್ ಕಾರ್ನರ್, ಒಳಾಂಗಣ ಕ್ರೀಡಾ ಕೊಠಡಿ ವಿಶೇಷವಾಗಿ ಎಸ್.ಎಸ್.ಎ ಯೋಜನೆಯಡಿಯ 2010-11 ಸಾಲಿನಲ್ಲಿ ಶೂನ್ಯ ತರಗತಿ (ಪೂರ್ವ ಪ್ರಾಥಮಿಕ ಶಿಕ್ಷಣ) ಜಾರಿಯಾಗಿ ಅತ್ಯುತ್ತಮವಾಗಿ ನಡೆಸಿದ್ದು, ಈ ಶಾಲೆಯ ವೈಶಿಷ್ಟವಾಗಿದೆ. ಪ್ರತಿ ವರ್ಷವೂ ಕೂಡ ಸರ್ಕಾರೇತರ ಶಾಲೆಗಿಂತಲೂ ಯಾವುದಕ್ಕೂ ಕಡಿಮೆ ಇಲ್ಲ ಎಂಬಂತೆ ಮಾದರಿ ಶಾಲೆಯಾಗಿರುವುದಷ್ಟೇ ಅಲ್ಲದೇ ಸನ್ಮಾನ್ಯ ಶಿಕ್ಷಣ ಸಚಿವರಾದ ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿಯವರೂ ಕೂಡ ಈ ಶಾಲೆಯ ಭೌತಿಕ ಹಾಗೂ ಶೈಕ್ಷಣಿಕ ಪ್ರಗತಿ ಕಂಡು ಕೊಂಡಾಡಿರುವುದು ಹೆಮ್ಮೆಯ ವಿಷಯವಾಗಿದೆ.



ಸನ್ಮಾನ್ಯ ಶಿಕ್ಷಣ ಸಚಿವರು ರೀಡಿಂಗ್ ಕಾರ್ನರ್ ಉದ್ಘಾಟಿಸಿ ಮೆಚ್ಚುಗೆ ವ್ಯಕ್ತಪಡಿಸುತ್ತಿರುವುದು

# ಶಾಲಾ ವಾರ್ಷಿಕ ವರದಿ

| | | |
|---|---|---|
| 1 | ±Á¯AiÀ ºÉ¸gÀ | ¸gÀPÁj »jAiÀ ¥Áæ«ÄP ±Á¯É, UÁA¢£Ug, ²g¹ |
| 2 | ±Á¯Á ¸Áí¥À£É ªµÀð | 17-02-1973 |
| 3 | ±Á¯Á ªÀÄ¦AiÀ ªÀÄdgÀU¼À | UÁA¢£Ug, ºÉ°AiÀÄ¥£UÀq, CA¨ÁVj, ªÁqð ¸ASÉ : 28 ªÀÄvÀ 29 |
| 4 | PÆo rU¼ ¸ASÉ | 16- ªUðz PÆÃuU¼À-07, ªÀÄÄ.²PPgÀ-01, ¥ÁæxÀÆÃUÁ®AiÀ ºÁUÆ JdÀ¸ÁÉl PÆor 01, ªÁZ£Á®AiÀ PÆor -01, M¼ÁAUt QæqÁ PÆor,-01, PA¥ÆÉlgï PÆor-01, AiÆÃUÁ¸£ PÆor-01, ©¹AiÀÄÆl PÆor-01, ¨Á®ªÁr (±ÆÉ£ vgUw) PÆor-01, zÁ¸Á£À- 01 |
| 5 | D¸£ ªÀ¦ª¸Ü | 90% gµÀ ªÀÄP½U ¦ÃoÆÃ¥Pg t ªÀ¦ª¸Ü¬Äz. J¸ï.J¸ï.J. AiÆÃd£AiÀr<br>23 x 3 = 69 «zÁåyðU½U, £Ug¸¨¬ÄAz 16 x 2= 32 ªÀÄP½U, zªÀÄð¸Ü¼ UÁæiÁ©ªÀÉ¢Ü ¸AW¢Az 6 x 4=24. MlÆ 4, 5, 6 ªÀÄvÀ 7£Ã ªUðz 125 ªÀÄP½U q¸ïÌ ¨AZÀ ªÀ¦ª¸Ü EgÀvz. |
| 6 | ²PPg ªÀÄAdÆj ºÀzÉ | 8 ºÀzÉU¼À = ªÀÄÄ. ²PPgÀ-01, ¸. ²PPgÀ-06, zÉÊ. ²PPgÀ-01 |
| 7 | PÁAiÀð ¤ªð»¸ÀwgÀª ²PPgÀ | 8 ºÀzÉU¼À = ªÀÄÄ. ²PPgÀ-01, ¸. ²PPgÀ-06, zÉÊ. ²PPgÀ-01 |
| 8 | 2011-12 g° zÁR¯Áz «ªg<br>UAqÀ = 107<br>ºtÀ = 104 = CAvÆ 211 | 2011-12 g ºÁdgÁw «ªg<br>UA + º = CAvÀ<br>107 + 104 = 211<br><br>¥.eÁ.zÁR¯Áw ºÁdgÁw<br>UA + º = CA UA + º = CA<br>17 + 16 = 33 17 + 16 = 33 |
| 9 | ¤ªiÁðtUÆAq J¸ï.J¸ï.J. ºZÀªj PÆorU¼À. ¸ASÉ | MlÆ 03 2007-08 g ªÀÄAdÆj 01<br>2009-10 g ªÀÄAdÆj 02<br>PÁªÀÄUÁj ¥ÆtðUÆArz |

## ಶಾಲಾ ಶಿಕ್ಷಕರ ಸೇವಾ ವಿವರ

| ಅ.ನಂ | ಶಿಕ್ಷಕ/ಕಿಯರ ಹೆಸರು | ಹುದ್ದೆ | ಜನ್ಮದಿನಾಂಕ | ಸೇವೆಗೆ ಸೇರಿದ ದಿನಾಂಕ | ಈಗಿರುವ ಶಾಲೆಯಲ್ಲಿ ಕಾರ್ಯ ನಿರ್ವಹಿಸುತ್ತಿದ್ದ ಅವಧಿ | ವಿದ್ಯಾರ್ಹತೆ |
|---|---|---|---|---|---|---|
| 1 | ಶ್ರೀ ಕುಮಾರ ಎಸ್ ನಾಯ್ಕ | ಮು.ಶಿ | 01-06-1958 | 25-07-1981 | 31-10-2007 | ಕಗಅ. ಖ.ಅ.ಊ |
| 2 | ಶ್ರೀಮತಿ ಲಲಿತಾ ವಿ. ಗುನಗಾ | ಸ.ಶಿ. | 15-03-1956 | 10-01-1977 | 04-06-1993 | ಖಖಐ.ಅ. ಖ.ಅ.ಊ |
| 3 | ಶ್ರೀಮತಿ ಅರುಣಾ ಜಿ. ಪಟಗಾರ | ಸ.ಶಿ. | 01-03-1964 | 01-10-1982 | 04-06-2005 | ಖಖಐ.ಅ., ಃ.೦ ಖ.ಅ.ಊ |
| 4 | ಶ್ರೀಮತಿ ತಾರಾ ಎನ್. ಶೆಟ್ಟಿ | ಸ.ಶಿ. | 14-10-1957 | 01-06-1985 | 19-10-2005 | ಖಖಐ.ಅ. ಖ.ಅ.ಊ |
| 5 | ಶ್ರೀಮತಿ ಲತಾ ಆರ್. ಶೆಟ್ಟಿ | ಸ.ಶಿ. | 22-07-1973 | 20-07-1994 | 18-07-2000 | ಕಗಅ. ಖ.ಅ.ಊ |
| 6 | ಶ್ರೀ ರಮೇಶ ಎಲ್. ಮುರ್ಡೇಶ್ವರ | ದೈ.ಶಿ | 11-10-1961 | 26-07-1994 | 26-07-1994 | ಕಗಅ. ಖ.ಅ.ಊ |
| 7 | ಶ್ರೀಮತಿ ಬಿ.ಆರ್.ಲತಾ | ಸ.ಶಿ. | 25-05-1976 | 19-08-1998 | 20-07-2003 | ಕಗಅ. ಖ.ಅ.ಊ |
| 8 | ಶ್ರೀಮತಿ ಗೀತಾ ಎಸ್ ಹೆಗಡೆ | ಸ.ಶಿ. | 08-06-1975 | 21-08-1998 | 13-07-2007 | ಕಗಅ. ಖ.ಅ.ಊ |

ಇಲ್ಲಿರುವಂತಹನ 8 ಜನ ಶಿಕ್ಷಕರಲ್ಲಿ 6 ಜನ ಮಹಿಳಾ ಶಿಕ್ಷಕರಿದ್ದು, ಎಲ್ಲಾ ಶಿಕ್ಷಕರು ಉತ್ತಮವಾಗಿ ಕರ್ತವ್ಯ ನಿರ್ವಹಿಸುತ್ತಿದ್ದು, ತರಬೇತಿಯ ಅನುಪಾಲನೆಯ ಜೊತೆಗೆ ಮಗುಸ್ನೇಹಿ ಶಿಕ್ಷಕರಾಗಿದ್ದು, ವಿದ್ಯಾರ್ಥಿಗಳಿಗೆ ಗುಣಾತ್ಮಕ ಶಿಕ್ಷಣ ನೀಡುವ ನಿಟ್ಟಿನಲ್ಲಿ ಉತ್ತಮ ಯೋಜನೆಗಳನ್ನು ಹೊಂದಿದ್ದು, ಸಾಕಷ್ಟು ಪೂರ್ವತಯಾರಿಯೊಂದಿಗೆ ಸಂದರ್ಭೋಚಿತವಾಗಿ ಕಲಿಕೋಪಕರಣಗಳನ್ನು ಹಾಗೂ ಉತ್ತಮ ಚಟುವಟಿಕೆಗಳ ಮೂಲಕ ವಿದ್ಯಾರ್ಥಿಗಳಿಗೆ ಕಲಿಯಲು ಪ್ರೇರೇಪಣೆ ನೀಡುತ್ತಿದ್ದಾರೆ. ಈ ಶಾಲೆಯ ಎಲ್ಲಾ ಶಿಕ್ಷಕರು 10-11ನೇ ಸಾಲಿನಲ್ಲಿ ಕ್ರಿಯಾ ಸಂಶೋಧನೆಯನ್ನು ಕೈಗೊಂಡು ಕಲಿಕೆಯಲ್ಲಿ ಹಿಂದುಳಿದ ವಿದ್ಯಾರ್ಥಿಗಳ ಪ್ರಬುದ್ಧ ಮಟ್ಟ ಕಲಿಕೆಗೆ ಶ್ರಮಿಸಿದ್ದು, ಈ ಸಾಲಿನಲ್ಲಿಯೂ ಕೂಡ ಈ ಕಾರ್ಯವನ್ನು ಕೈಗೊಂಡಿದ್ದಾರೆ. ಸಾಮರ್ಥ್ಯವಾರು ಕಲಿಕೋಪಕರಣಗಳನ್ನು ಹೊಂದಿಸಿಕೊಳ್ಳಲು ಶ್ರಮಿಸುತ್ತಿದ್ದು, ಕ್ಲಸ್ಟರ್ ಹಂತ, ತಾಲೂಕಾ ಹಂತ, ಹಾಗೂ ಜಿಲ್ಲಾ ಹಂತಗಳಲ್ಲಿ ಭಾಗವಹಿಸಿರುತ್ತಾರೆ. ವಿದ್ಯಾರ್ಥಿಗಳು ಮಾಡಿದ ಸಾಧನೆಯಲ್ಲಿ ಎಲ್ಲಾ ಶಿಕ್ಷಕರ ಶ್ರಮವಿರುವುದು ಸ್ವಾಗತಾರ್ಹ ವಿಷಯವಾಗಿದೆ.

ಈ ಶಾಲೆ ಹಾಗೂ ಶಿಕ್ಷಕರ ಬಗ್ಗೆ ಆ ಭಾಗದ ಜನಪ್ರತಿನಿಧಿಗಳು, ಸಮುದಾಯ ಹಾಗೂ ಪಾಲಕರಿಂದಲೂ ಉತ್ತಮವಾದ ಅಭಿಪ್ರಾಯ ವ್ಯಕ್ತವಾಗಿದೆ. ಈ ಶಾಲೆಯಲ್ಲಿ **"ತಾಯಂದಿರ ಸಮಿತಿಯು"** ಉತ್ತಮವಾಗಿ ಕಾರ್ಯ ನಿರ್ವಹಿಸುತ್ತಿದ್ದು, ಪ್ರತೀ ದಿನ 3 ಮಾತೆಯರು ಸರದಿಯಂತೆ ಉಪಹಾರ ಯೋಜನೆಯಲ್ಲಿ ತೊಡಗಿಸಿಕೊಂಡು ತಮ್ಮ ಮಕ್ಕಳಿಗೆ ಉತ್ತಮ ಉಪಹಾರ ದೊರಕಿಸಿಕೊಡುವಲ್ಲಿ ಮಾದರಿ ಎನಿಸಿದ್ದಾರೆ. ಈ ಶಾಲೆಯ ಎಸ್.ಡಿ.ಎಂ.ಸಿ ಕೂಡ ಉತ್ತಮವಾಗಿ ಎಲ್ಲರೊಂದಿಗೆ ಸಮನ್ವಯದಿಂದ ಕಾರ್ಯ ನಿರ್ವಹಿಸುತ್ತಿದ್ದು, ಶಾಲಾ ಅಭಿವೃದ್ಧಿಗೆ ಅಗತ್ಯವಾದ ತೀರ್ಮಾನಗಳನ್ನು ತೆಗೆದುಕೊಂಡು ಕಾರ್ಯ ನಿರ್ವಹಿಸುತ್ತಿದೆ. ದಾನಿಗಳಿಂದ ದೇಣಿಗೆಗಳನ್ನು ಪಡೆಯುವಲ್ಲಿ ಹಾಗೂ ದತ್ತು ನಿಧಿಗಳನ್ನು ಕೂಡ ಪಡೆದುಕೊಂಡಿದೆ. ರೂ 20000ದಷ್ಟು ದತ್ತು ನಿಧಿಯನ್ನು ಹೊಂದಿರುವುದು ಇದರ ವಿಶೇಷತೆಯಾಗಿದೆ.

ವಿದ್ಯಾರ್ಥಿಗಳಿಗೆ ಅಗತ್ಯವಾದ ಭೌತಿಕ ಸೌಲಭ್ಯಗಳಾದ ಕೊಠಡಿ, ಹೆಣ್ಣು ಮಕ್ಕಳು & ಗಂಡು ಮಕ್ಕಳಿಗೆ ಸಾಕಷ್ಟು ಪ್ರತ್ಯೇಕ ಶೌಚಾಲಯ, ಕುಡಿಯುವ ನೀರು, ಪೀಠೋಪಕರಣ, ರ್‍ಯಾಂಪ್‌ಗಳನ್ನು ಹೊಂದಿದೆ.

# ಕ್ರೀಡಾಕೂಟದ ಸಾಧನೆಗಳ ವಿವರ

## 2010-11ನೇ ಸಾಲಿನ ಕ್ಲಸ್ಟರ್ ಹಂತದಲ್ಲಿ ಬಹುಮಾನ ಪಡೆದ ಮಕ್ಕಳ ಸಂಖ್ಯೆ :

ಕಿರಿಯರ ವಿಭಾಗದಲ್ಲಿ ಬಹುಮಾನ ಪಡೆದ ಮಕ್ಕಳ ಸಂಖ್ಯೆ : 15

ಹಿರಿಯರ ವಿಭಾಗದಲ್ಲಿ ಬಹುಮಾನ ಪಡೆದ ಮಕ್ಕಳ ಸಂಖ್ಯೆ : 24

- ❖ ಕ್ಲಸ್ಟರ್ ಮಟ್ಟದಲ್ಲಿ ಆಯ್ಕೆಗೊಂಡು ತಾಲೂಕಾ ಮಟ್ಟದಲ್ಲಿ ಪ್ರತಿಭಾ ಕಾರಂಜಿಯಲ್ಲಿ ಬಹುಮಾನ ಪಡೆದ ಮಕ್ಕಳ ಸಂಖ್ಯೆ : 24

  ಕಿರಿಯರ ವಿಭಾಗದಲ್ಲಿ ಬಹುಮಾನ ಪಡೆದ ವಿದ್ಯಾರ್ಥಿಗಳ ಸಂಖ್ಯೆ : 12

  ಹಿರಿಯರ ವಿಭಾಗದಲ್ಲಿ ಬಹುಮಾನ ಪಡೆದ ವಿದ್ಯಾರ್ಥಿಗಳ ಸಂಖ್ಯೆ : 12

- ❖ ಹಿರಿಯ ವಿಭಾಗದ ಪ್ರತಿಭಾ ಕಾರಂಜಿಯಲ್ಲಿ ಯೋಗಾಸನ ಸ್ಪರ್ಧೆಯಲ್ಲಿ ಪ್ರಥಮ ಬಹುಮಾನ ಪಡೆದ ವಿದ್ಯಾರ್ಥಿ ಸಂಖ್ಯೆ 01
- ❖ ಹಿರಿಯ ವಿಭಾಗದ ಪ್ರತಿಭಾ ಕಾರಂಜಿಯ ತಾಲೂಕಾಮಟ್ಟದ ಯೋಗಾಸನ ಸ್ಪರ್ಧೆಯಲ್ಲಿ ಪ್ರಥಮ ಬಹುಮಾನ ಪಡೆದ ವಿದ್ಯಾರ್ಥಿ ಸಂಖ್ಯೆ 01

## ಕ್ರೀಡಾಕೂಟದ ಸಾಧನೆ

- ❖ ಕ್ರೀಡಾಕೂಟದ 14 ವಯೋಮಿತಿಯ ಸ್ಪರ್ಧೆಯಲ್ಲಿ ಕುಮಾರಿ ಶೃತಿ ನಾಗರಾಜ ವೆರ್ಣೇಕರ ವಿಭಾಗೀಯ ಮಟ್ಟದಲ್ಲಿ ದ್ವಿತೀಯ ಸ್ಥಾನ ಪಡೆದಿರುತ್ತಾಳೆ.

.

# 2010-11 ನೇ ಸಾಲಿನ ಪ್ರತಿಭಾ ಕಾರಂಜಿ ಸಾಧನೆ ವಿವರ

❖ **ನವಂಬರ ಮೊದಲನೇ ವಾರದಲ್ಲಿ ಶಾಲಾ ಹಂತದ ಪ್ರತಿಭಾ ಕಾರಂಜಿ ಸ್ಪರ್ಧೆಗೆ**

ಕಿರಿಯರ ವಿಭಾಗದಲ್ಲಿ ಭಾಗವಹಿಸಿದ ಮಕ್ಕಳ ಸಂಖ್ಯೆ : 50 + 40

ಹಿರಿಯರ ವಿಭಾಗದಲ್ಲಿ ಭಾಗವಹಿಸಿದ ಮಕ್ಕಳ ಸಂಖ್ಯೆ : 40 + 55

❖ **ನವಂಬರ 19 ಮತ್ತು 20 ನೇ ತಾರೀಕಿನಂದು ನಡೆದ ಕ್ಲಸ್ಟರ್ ಮಟ್ಟದ ಪ್ರತಿಭಾ ಕಾರಂಜಿಗೆ**

ಕಿರಿಯರ ವಿಭಾಗದಲ್ಲಿ ಭಾಗವಹಿಸಿದ ಮಕ್ಕಳ ಸಂಖ್ಯೆ : 25

ಹಿರಿಯರ ವಿಭಾಗದಲ್ಲಿ ಭಾಗವಹಿಸಿದ ಮಕ್ಕಳ ಸಂಖ್ಯೆ : 50

❖ **ಕಿರಿಯರ ವಿಭಾಗದಲ್ಲಿ ಬಹುಮಾನ ಪಡೆದ ಮಕ್ಕಳ ವಿವರ** :

| | | |
|---|---|---|
| ನಿಶಾ ಭಾಸ್ಕರ ಭಟ್ಕಳ - ಹಿಂದಿ ಕಂಠಪಾಠ | : | ಪ್ರಥಮ |
| ಪ್ರತಿಕ್ಷಾ ರಾಯ್ಕರ - ಸಂಸ್ಕ್ರತ ಸುಭಾಷಿತ | : | ತೃತಿಯ |
| ಸುಷ್ಮಾ ರವೀಂದ್ರ ಭಟ್ - ಕೊಂಕಣಿ ಹಾಡಿ | : | ತೃತಿಯ |
| ಪ್ರತಿಕ್ಷಾ ಸಂಗಡಿಗರು – ಜಾನಪದ ನೃತ್ಯ | : | ಪ್ರಥಮ |
| ಸೌಮ್ಯ ಸಂಗಡಿಗರು – ಕೋಲಾಟ | : | ಪ್ರಥಮ |

❖ **ಹಿರಿಯರ ವಿಭಾಗದಲ್ಲಿ ಬಹುಮಾನ ಪಡೆದ ಮಕ್ಕಳ ವಿವರ** :

| | | |
|---|---|---|
| ಕನ್ನಡ ಕಂಠಪಾಠ : | ಸ್ವಾತಿ ನಾಗರಾಜ ನಾಯ್ಕ - | ಪ್ರಥಮ |
| ಹಿಂದಿ ಕಂಠಪಾಠ : | ಮೇಘನಾ ವೆಂಗುರ್ಲೇಕರ - | ಪ್ರಥಮ |
| ಇಂಗ್ಲೀಷ ಕಂಠಪಾಠ : | ಮೇಘನಾ ವೆಂಗುರ್ಲೇಕರ - | ದ್ವಿತಿಯ |
| ದಾಸರ ಪದ : | ವಿಭಾ ನಾಗೇಂದ್ರ ಭಟ್ಟ - | ದ್ವಿತಿಯ |
| ಭಗವದ್ಗೀತೆ : (ಧಾರ್ಮಿಕ ಪಠಣ) | ವಿಭಾ ನಾಗೇಂದ್ರ ಭಟ್ಟ - | ತೃತಿಯ |
| ಜಾನಪದ ನೃತ್ಯ : | ಸಂಜನಾ ಸಂಗಡಿಗರು - | ದ್ವಿತಿಯ |
| ಕೋಲಾಟ : | ಅನುಷಾ ಸಂಗಡಿಗರು - | ಪ್ರಥಮ |
| ಯೋಗಾಸನ _ | ವೆರ್ಣೇಕರ ಶೃತಿ ನಾಗರಾಜ - | ಪ್ರಥಮ |

**ಡಿಸೆಂಬರ 06-2010 ರಂದು ನಡೆದ ತಾಲೂಕು ಮಟ್ಟದ ಪ್ರತಿಭಾ ಕಾರಂಜಿ**

ಕಿರಿಯರ ವಿಭಾಗದಲ್ಲಿ ಭಾಗವಹಿಸಿದ ಮಕ್ಕಳ ಸಂಖ್ಯೆ : 13

ಹಿರಿಯರ ವಿಭಾಗದಲ್ಲಿ ಭಾಗವಹಿಸಿದ ಮಕ್ಕಳ ಸಂಖ್ಯೆ : 09

**ಕಿರಿಯರ ವಿಭಾಗದಲ್ಲಿ ಬಹುಮಾನ ಪಡೆದ ಮಕ್ಕಳ ವಿವರ**

| | | |
|---|---|---|
| ಜಾನಪದ ನೃತ್ಯ | : ಪ್ರತಿಕ್ಷಾ ಸಂಗಡಿಗರು | : ಪ್ರಥಮ |
| ಕೋಲಾಟ | : ಸೌಮ್ಯ ಸಂಗಡಿಗರು | : ದ್ವಿತೀಯ |

**ಹಿರಿಯರ ವಿಭಾಗದಲ್ಲಿ ಬಹುಮಾನ ಪಡೆದ ಮಕ್ಕಳ ವಿವರ :**

| | | |
|---|---|---|
| ಯೋಗಾಸನ | : ವೆರ್ಣೇಕರ ಶೃತಿ ನಾಗರಾಜ | : ಪ್ರಥಮ |
| ಕನ್ನಡ ಕಂಠಪಾಠ | : ಸ್ವಾತಿ ಎನ್. ನಾಯ್ಕ | : ದ್ವಿತೀಯ |
| ದೇಶ ಭಕ್ತಿಗೀತೆ | : ಅನೀಷಾ ಸಂಗಡಿಗರು | : ತೃತೀಯ |

**ಹಿರಿಯರ ವಿಭಾಗದ ಜಿಲ್ಲಾ ಮಟ್ಟದ ಪ್ರತಿಭಾ ಕಾರಂಜಿಗೆ ಡಿಸೆಂಬರ-22-2010 ರಂದು**

ಭಾಗವಹಿಸಿದ ಮಕ್ಕಳ ಸಂಖ್ಯೆ : 01 ವೆರ್ಣೇಕರ ಶೃತಿ ನಾಗರಾಜ : (ಯೋಗಾಸನ)

**ಶಾಲೆಯಲ್ಲಿ ಸಂಘಟಿಸಿದ ವಾರ್ಷಿಕ, ಸಾಂಸ್ಕೃತಿಕ ಕಾರ್ಯಕ್ರಮ : ಶೈಕ್ಷಣಿಕ ಪ್ರವಾಸ, ಸ್ಪರ್ಧೆಗಳು ಮತ್ತು ಇತರ ಸಾಧನೆಗಳು**

- ಸ್ವಾತಂತ್ರ್ಯೋತ್ಸವದ ಅಂಗವಾಗಿ ಭಾಷಣ, ದೇಶ ಭಕ್ತಿಗೀತೆಗಳ ಕಾರ್ಯಕ್ರಮ ನಡೆಸಲಾಯಿತು.
- ಶಿಕ್ಷಕರ ದಿನಾಚರಣೆಯನ್ನು ಮಕ್ಕಳೆ ಶಿಕ್ಷಕರಿಗಾಗಿ ವಿವಿಧ ಮನರಂಜನಾ ಸ್ಪರ್ಧೆ ನಡೆಸುವ ಮೂಲಕ ಅದ್ದೂರಿಯಾಗಿ ನಡೆಸಿದರು.
- ಗಾಂಧಿ ಜಯಂತಿಯ ಅಂಗವಾಗಿ ಅಂದು ಮುಂಜಾನೆ ವಿದ್ಯಾರ್ಥಿಗಳು ಶಿಕ್ಷಕರೊಂದಿಗೆ ಶ್ರಮದಾನ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ನಂತರ ಶಾರದಾ ಪೂಜೆ ಮಾಡಿ, ಸರ್ವಧರ್ಮ ಪ್ರಾರ್ಥನೆ ಹಾಗೂ "ಸಪ್ತಪಾತಕ" ಗಳ ಕುರಿತು ವಿದ್ಯಾರ್ಥಿಗಳು ಭಾಷಣ ಮಾಡುವುದರೊಂದಿಗೆ ಗಾಂಧಿ ಜಯಂತಿಯನ್ನು ಶೃದ್ಧಾಪೂರ್ವಕವಾಗಿ ಆಚರಿಸಲಾಯಿತು.
- ಕರ್ನಾಟಕ ರಾಜ್ಯೋತ್ಸವ ಆಚರಣೆ, ಕನಕದಾಸ ಜಯಂತಿ ಆಚರಣೆ ಇಪ್ಪತ್ತಕ್ಕೂ ಹೆಚ್ಚು ಅಂಗಡಿಗಳಿಂದ ರೂ. 8,000/- ವ್ಯವಹಾರವಾಯಿತು. ಮೆಟ್ರಿಕ ಮೇಳ ಏರ್ಪಡಿಸುವ್ ಮೂಲಕ ಮಕ್ಕಳ ದಿನದ ಆಚರಣೆ ಹಮ್ಮಿಕೊಳ್ಳಲಾಯಿತು. ಸ್ಥಳಿಯ ಟಿ.ವಿ. ಚಾನಲ್‌ನಲ್ಲಿ ಪ್ರಸಾರವಾಯಿತು.
- ಶೈಕ್ಷಣಿಕ ಪ್ರವಾಸವನ್ನು ಸರಕಾರಿ ಬಸ್ಸಿನಲ್ಲಿ ಹಾನಗಲ್, ವರೂರು, ಅತ್ತಿವೇರಿ ಪಕ್ಷಿಧಾಮ, ಬಾಚಣಕಿ ಜಲಾಶಯ, ಚಿಗಳ್ಳಿ ದೀಪ, ಟಿಬೇಟಿಯನ್ ಕಾಲೋನಿ ಮುಂತಾದವು ಕಡೆ ಯಶಸ್ವಿಯಾಗಿ ನಡೆಸಲಾಯಿತು. ಇದರಲ್ಲಿ 77 ಮಕ್ಕಳು ಪಾಲ್ಗೊಂಡಿದ್ದರು.
- ಎಸ್.ಡಿ.ಎಂ.ಸಿ. ಸಭೆ : 8, ಪಾಲಕರ ಪೋಷಕರ ಸಭೆ :4, ಹೊಸ ಎಸ್.ಡಿ.ಎಂ.ಸಿ. ರಚನೆ, ಹೊರ ಸಂಚಾರ – ಕಲ್ಕಣಿ, 3 ಸಮುದಾಯದತ್ತ ಶಾಲಾ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ.
- ಮಕ್ಕಳ ಗಣತಿ ಕಾರ್ಯ, ಗಣರಾಜ್ಯೋತ್ಸವದ ಆಚರಣೆ ಯಶಸ್ವಿಯಾಗಿ ನಡೆಸಿ ಗಣತಿ ಕಾರ್ಯದಲ್ಲಿ ಶಾಲೆಗೆ ದಾಖಲಾಗಬೇಕಾದ ಮಕ್ಕಳನ್ನು ಗುರುತಿಸುವುದು.
- 7ನೇ ವರ್ಗದ ಬೀಳ್ಕೊಡೆಗೆ ಕಾರ್ಯಕ್ರಮ ನಡೆಸಲಾಯಿತು. ಮಕ್ಕಳಿಂದ 14 ಸ್ಟೂಲ್, 13 ಪ್ಲಾಸ್ಟಿಕ್ ಖುರ್ಚಿ ದೇಣಿಗೆ ಪಡೆಯಲಾಯಿತು.
- ಎರಡನೇ ಸೆಮಿಸ್ಟರ್ ಪರೀಕ್ಷೆ ನಡೆಸಿ ಫಲಿತಾಂಶ ಪ್ರಕಟಣೆ.

- 2010-11ನೇ ಸಾಲಿನ ಕ್ಲಸ್ಟರ್ ಮಟ್ಟದ ಮೆಟ್ರಿಕ್ ಮೇಳದಲ್ಲಿ ಪ್ರಥಮ ಸ್ಥಾನ ಪಡೆದಿರುತ್ತಾರೆ.
- ತಾಲೂಕಾ ಮಟ್ಟದ ಟಿ.ಎಲ್.ಎಂ. ಮೇಲದಲ್ಲಿ ಶಿಕ್ಷಕವೃಂದದವರು ಭಾಗವಹಿಸಿ ದ್ವಿತೀಯ ಸ್ಥಾನ ಪಡೆದಿರುತ್ತಾರೆ.
- ಶ್ರೀ ಧರ್ಮಸ್ಥಳ ಶಾಂತಿವನ ಟ್ರಸ್ಟ್‌ರವರು ನಡೆಸಿದ ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ತಾಲೂಕಾ ಮಟ್ಟದಲ್ಲಿ ಪ್ರಥಮ ಬಹುಮಾನವನ್ನು, ಪ್ರಾರ್ಥನಾ ಶ್ಲೋಕಗಳ ಕಂಠಪಾಠ ಸ್ಪರ್ಧೆಯಲ್ಲಿ ವಿಭಾ ನಾಗೇಂದ್ರ ಭಟ್ ಇವಳು ಪಡೆದು ಜಿಲ್ಲಾಮಟ್ಟಕ್ಕೆ ಆಯ್ಕೆಯಾಗಿರುತ್ತಾಳೆ.
- ಶಿರಸಿ ನಗರಸಭೆಯವರು ಏರ್ಪಡಿಸಿದ **'ತ್ಯಾಜ್ಯ ವಸ್ತುಗಳ ವಿಲೇವಾರಿ'** ವಿಷಯದ ಕುರಿತು ನಡೆಸಿದ ಚಿತ್ರಕಲಾ ಸ್ಪರ್ಧೆಯಲ್ಲಿ ಸತತವಾಗಿ ಎರಡು ವರ್ಷಗಳಿಂದ ಕುಮಾರಿ ಧನ್ಯ ಉಮೇಶ ಉಗ್ರಾಣಕರ ಇವಳು ಪ್ರಥಮ ಬಹುಮಾನ ಪಡೆದಿರುತ್ತಾಳೆ.
- ಮೀನಾ ತಂಡದ ರಚನೆ : ಹೆಣ್ಣು ಮಕ್ಕಳ ಹಿಂಜರಿಕೆಯನ್ನು ಹೋಗಲಾಡಿಸುವುದು, ಹಾಜರಾತಿಯನ್ನು ಉತ್ತಮ ಪಡಿಸುವುದು, ಹೆಣ್ಣು ಮಕ್ಕಳ ಶಿಕ್ಷಣದ ಮಹತ್ವವನ್ನು ತಿಳಿಸುವ ತಾಯಂದಿರ ಮೇಳವನ್ನು ಏರ್ಪಡಿಸುವುದು. ಹಾಡು ರೂಪಕ ನಾಟಕಗಳ ಮೂಲಕ ಕಾರ್ಯಕ್ರಮವನ್ನು ಆಯೋಜಿಸಿ ಜಾರಿ ತರಲಾಗಿದೆ. ವಾರ್ಷಿಕ ಸ್ನೇಹ ಸಮ್ಮೇಲನದಲ್ಲಿ ಮಕ್ಕಳ ನಾಟಕವನ್ನು ಪ್ರದರ್ಶಿಸಲಾಯಿತು.
- ಸ್ಪಷ್ಟ ಓದು, ಶುದ್ಧ ಬರಹ, ಕಲಿಕಾ ಸಾಮರ್ಥ್ಯ ವಿಕಾಸ ವರ್ಷದ ಅಂಗವಾಗಿ ಮಕ್ಕಳಿಗೆ ಪ್ರತಿದಿನ ಓದು ಮತ್ತು ಸ್ಪಷ್ಟ ಬರಹ ಮಾಡಿಸುವ ಮೂಲಕ ಪ್ರತಿ ತಿಂಗಳು ಸ್ಪರ್ಧೆ ಮಾಡಿ ಬಹುಮಾನವನ್ನು ವಿತರಿಸಲಾಗುತ್ತಿದೆ.
- ರೀಡಿಂಗ್ ಕಾರ್ನರ್ (ವಾಚನಾಲಯ) ಪ್ರಾರಂಭಿಸಿ ಮಕ್ಕಳಿಗೆ ಕೈಬರಹ ಪತ್ರಿಕೆ ಪ್ರತಿ ತಿಂಗಳಿಗೊಂದರಂತೆ 4, 5, 6 ಮತ್ತು 7ನೇ ವರ್ಗಕ್ಕೆ ಪ್ರತ್ಯೇಕವಾಗಿ ನಿರ್ಮಿಸಲಾಗುತ್ತಿದ್ದು, ಫೆನಲ್ ಬೋರ್ಡ ಮೂಲಕ ವರ್ಣ ಚಿತ್ರಗಳನ್ನು ರಚಿಸಿ ಪ್ರದರ್ಶಿಸುತ್ತಿದ್ದಾರೆ. ಆಯ್ದ ಚಿತ್ರಗಳನ್ನು ರೀಡಿಂಗ್ ಕಾರ್ನರ್‌ನಲ್ಲಿ ಪ್ರದರ್ಶಿಸಲಾಗುತ್ತಿದೆ.
- ಶಾಲೆಯಲ್ಲಿ ಬಿಸಿಯೂಟದ ಯೋಜನೆಯು ಯಶಸ್ವಿಯಾಗಿ ಜಾರಿಯಾಗುತ್ತಿದ್ದು, ಶೇ. ೮೫ ರಷ್ಟು ಮಕ್ಕಳು ಪ್ರಯೋಜನಾ ಪಡೆಯುತ್ತಿದ್ದಾರೆ. ವಿಶೇಷವಾಗಿ ವಾರಕ್ಕೊಮ್ಮೆ ಪಲಾವು, ತಿಂಗಳಿಗೆ ಎರಡು ಬಾರಿ ಸಿಹಿಯೂಟ ಹಾಗೂ ಪ್ರತಿ ದಿನ ಉಪ್ಪಿನಕಾಯಿಯೊಂದಿಗೆ ಬಿಸಿಯೂಟವನ್ನು ರುಚಿ ಮತ್ತು ಶುಚಿಯಾಗಿ ನೀಡಲಾಗುತ್ತದೆ. ಸಿಹಿಯೂಟ ನೀಡಲು ಶಾಲಾ ಶಿಕ್ಷಕರು ವೈಯಕ್ತಿಕವಾಗಿ ಖಚು-ವೆಚ್ಚ ಭರಿಸುತ್ತಾರೆ




**ಎಜ್ಯುಸ್ಯಾಟ್ ಕಲಿಕೆ** : ಶಾಲೆಗೆ ಎಜ್ಯುಸ್ಯಾಟ್ ಸೌಲಭ್ಯವನ್ನು ಸ್ಥಳೀಯ ದಾನಿಗಳಿಂದ ಪಡೆದು ಮಕ್ಕಳಿಗೆ ಸಂಪೂರ್ಣ ಪ್ರಯೋಜನವನ್ನು ಒದಗಿಸುವ ಮೂಲಕ ಗುಣಾತ್ಮಕ ಶಿಕ್ಷಣದ ಎಡೆಗೆ ವಿದ್ಯಾರ್ಥಿಗಳನ್ನು ಕೊಂಡೊಯ್ಯಲು ಶ್ರಮಿಸಲಾಗುತ್ತಿದೆ.

**ನಲಿಕಲಿ ಅನುಷ್ಠಾನ** :

ಈ ಶಾಲೆಯಲ್ಲಿ ನಲಿಕಲಿ ಅನುಷ್ಠಾನವನ್ನು ಉತ್ತಮವಾಗಿ ಮಾಡಿದ್ದು, ಶಿಕ್ಷಕರು ಅದಕ್ಕೆ ಪೂರಕವಾಗಿ ಸಿದ್ಧತೆಯೊಂದಿಗೆ ವಿದ್ಯಾರ್ಥಿಗಳಿಗೆ ಚಟುವಟಿಕೆಗಳ ಮೂಲಕ ಉತ್ತಮ ಕಲಿಕೆಯಾಗುವಂತೆ ಶ್ರಮಿಸುತ್ತಿದ್ದಾರೆ. ನಲಿಕಲಿಗೆ ಪೂರಕವಾದ ಸಾಮಗ್ರಿಗಳನ್ನು ಜೋಡಿಸಿಕೊಂಡಿದ್ದು, ವಿದ್ಯಾರ್ಥಿಗಳಲ್ಲಿ ಸಂತಸದಾಯಕ ಕಲಿಕೆಯನ್ನು ಗಮನಿಸಲಾಗಿದೆ.




**ಕಂಪ್ಯೂಟರ್ ಕಲಿಕೆ** : ಇನಫೋಸಿಸ್ ಸಂಸ್ಥೆಯಿಂದ ಶಾಲೆಗೆ 4 ಕಂಪ್ಯೂಟರ್‌ಗಳನ್ನು ಪಡೆಯಲಾಗಿದ್ದು, ಕಂಪ್ಯೂಟರ್ ಮೂಲಕ ಸಿಡಿಗಳನ್ನು ಬಳಸಿ ವಿದ್ಯಾರ್ಥಿಗಳಿಗೆ ದೃಶ್ಯ-ಶ್ರವಣದ ಮೂಲಕ ಕಲಿಕೆಯನ್ನು ನೀಡಲಾಗುತ್ತಿದೆ. ಶಿಕ್ಷಣಕ್ಕೆ ಅಗತ್ಯವಾದ ಸಿಡಿಗಳನ್ನು ಹಾಗೂ ಸಾಫ್ಟವೇರ್‌ಗಳನ್ನು ಅಳವಡಿಸಿದ್ದು, ಮುಖ್ಯ ಶಿಕ್ಷಕರು ಹಾಗೂ ಸಹ ಶಿಕ್ಷಕರು ಸಾಂದರ್ಭಿಕವಾಗಿ ಅವುಗಳನ್ನು ಬಳಸುತ್ತಿದ್ದಾರೆ. ಕಂಪ್ಯೂಟರ್ ಶಿಕ್ಷಣ ನೀಡಲು ಸ್ವಯಂ ಸೇವಕಿಯೊಬ್ಬರು ಕರ್ತವ್ಯ ನಿರ್ವಹಿಸುತ್ತಿದ್ದಾರೆ.




**ವಾಚನಾ ಮೂಲೆ** : ಸರಕಾರದ ಆದೇಶದಂತೆ ಶಾಲೆಯಲ್ಲಿ ವಿದ್ಯಾರ್ಥಿಗಳ ಬಿಡುವಿನ ವೇಳೆಯಲ್ಲಿ ಗ್ರಂಥಾಲಯದಲ್ಲಿರುವ ಪುಸ್ತಕಗಳನ್ನು ಓದಿ ಜ್ಞಾನ ಬಂಢಾರವನ್ನು ಹೆಚ್ಚಿಸಿಕೊಳ್ಳಲು ಪೂರಕವಾಗುವಂತೆ ವಾಚನಾ ಕೋಣೆಯನ್ನು ವ್ಯವಸ್ಥಿತಗೊಳಿಸಿದ್ದು, ಶಿಕ್ಷಕರು ಮಕ್ಕಳಿಗೆ ಈ ಬಗ್ಗೆ ಒಲವು ಮೂಡುವಂತೆ ಉತ್ತಮ ಪ್ರಯತ್ನ ಹಾಕುತ್ತಿದ್ದಾರೆ. ಗ್ರಂಥಾಲಯದಲ್ಲಿ 1200ಕ್ಕಿಂತ ಹೆಚ್ಚು ಪುಸ್ತಕಗಳು ಇದ್ದು, ಶಿಕ್ಷಕರ ಹಾಗೂ ಮಕ್ಕಳ ಓದುವ ಹವ್ಯಾಸವನ್ನು ಹೆಚ್ಚಿಸುವಲ್ಲಿ ನೆರವಾಗಿದೆ.



**ಪ್ರಯೋಗಾಲಯ** : ಶಾಲೆಯಲ್ಲಿ ತೀರಾ ದೊಡ್ಡದಲ್ಲದಿದ್ದರೂ 7ನೇ ತರಗತಿಯವರೆಗಿನ ವಿದ್ಯಾರ್ಥಿಗಳಿಗೆ ವಿಜ್ಞಾನ ವಿಷಯವನ್ನು ಪ್ರಾಯೋಗಿಕವಾಗಿ ತಿಳಿದುಕೊಳ್ಳಲು ಅಗತ್ಯವಾದ ಉಪಕರಣಗಳನ್ನು ಹಾಗೂ ಸಾಮಗ್ರಿಗಳನ್ನು ಹೊಂದಿದ ಸುಸಜ್ಜಿತವಾದ ಪ್ರಯೋಗಾಲಯವಿದ್ದು, ಶಿಕ್ಷಕರು ವಿದ್ಯಾರ್ಥಿಗಳಿಗೆ ಅವುಗಳ ಪ್ರಯೋಜನವನ್ನು ನೀಡುತ್ತಿದ್ದಾರೆ.

## 2008-09ನೇ ಸಾಲಿನಿಂದ 2010-11ನೇ ಸಾಲಿನಲ್ಲಿಯ ಸಿವಿಲ್ ಕಾಮಗಾರಿಗಳು ಅನುದಾನಗಳ ನಿರ್ವಹಣೆ

| ಅನುದಾನಗಳ ವಿವರಗಳು | 2008-09ರ ವರೆಗೆನ | | 2009-10ರ ವರೆಗೆನ | | 2009-10ರ ವರೆಗೆನ | |
|---|---|---|---|---|---|---|
| | ಬಿಡುಗಡೆ | ಬಳಕೆ | ಬಿಡುಗಡೆ | ಬಳಕೆ | ಬಿಡುಗಡೆ | ಬಳಕೆ |
| ಶಾಲಾ ಅನುದಾನ | 38470 | 38470 | 12000 | 12000 | 12000 | 12000 |
| ಶಿಕ್ಷಕರ ಅನುದಾನ | 31000 | 31000 | 3652 | 3652 | 4000 | 4000 |
| ಕುಡಿಯುವ ನೀರು | 10000 | 10000 | - | - | - | - |
| ಶೌಚಾಲಯ | 25000 | 25000 | - | - | - | - |
| ವಿದ್ಯುತ್ | 5000 | 5000 | - | - | - | - |
| ಕ್ರಿಯಾ ಸಂಶೋಧನೆ | 1200 | 400 | - | 400 | - | 400 |
| ಕಂಪೌಂಡ | 50000 | 50000 | - | - | - | - |
| ರ್‍ಯಾಂಪ್ಸ್ | 6000 | 6000 | - | - | - | - |
| ಮೇಜರ್ ರಿಪೇರಿ | 40000 | 40000 | - | - | - | - |
| ನಿರ್ವಹಣಾ ಅನುದಾನ | 76000 | 76000 | 20000 | 20000 | 20000 | 15000 |
| ಹೆಚ್ಚುವರಿ ಕೊಠಡಿ (2007-08) | 354500 | 354500 | 630500 | 630500 | - | - |
| ಹೊಸ ಕೊಠಡಿ | - | - | - | - | - | - |
| ಕಲಿಕಾ ಸಾಮಗ್ರಿ | 64000 | 64000 | 2800 | 2800 | - | - |
| ಪರಿಹಾರ ಬೋದನೆ | 10480 | 10480 | - | - | - | - |
| ಪಂಚ ಸೌಲಭ್ಯ ಯೋಜನೆ | 70000 | 70000 | - | - | | - |
| ದಾಸ್ತಾನು ಕೊಠಡಿ | 60000 | 60000 | - | - | - | - |
| 2 ಕೊಠಡಿಗಳ ರಿಪೇರಿ (ಅತಿವೃಷ್ಟಿ ಯೋಜನೆ) | - | - | 100000 | 100000 | - | - |
| ರಾಜ್ಯಯೋಜನೆ ವಿಶೇಷ ರಿಪೇರಿ 2 ಕೊಠಡಿ | | | 50000 | 50000 | | - |
| ಇತರೇ ಮೀನಾ ತಂಡ ಹಾಗೂ ಭೌಗೋಳಿಕ ಸನ್ನಿವೇಶ ನಿರ್ಮಾಣಕ್ಕೆ | | | | | 2000 | - |
| | **841650** | **840850** | **818952** | **819352** | **38000** | **31400** |